		(ಲಕ್ಷಗಳಲ್ಲಿ)
ಮೈಸೂರು	ಕೆಂಚಲಗೂಡು	16.00
ನಂಜನಗೂಡು	ಚಾಮಲಾಪುರ	08.50
ಮೈಸೂರು (ಇಳವಾಲ ಹೋಬಳಿ)	ಕಲ್ಲೂರನಾಗನಹಳ್ಳಿಕಾವಲ್ ಗುಂಗ್ರಾಲ್ ಛತ್ರ, ಯಲಚಹಳ್ಳಿ	36.50

ಚಿಕ್ಕಬಳ್ಳಾಪುರದಲ್ಲಿ ಗಣಿಗಾರಿಕೆ

174(900) ಶ್ರೀ ಸಂಪಂಗಿ ಎನ್:(ಬಾಗೇಪಲ್ಲಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಯಾವ ರೀತಿಯಲ್ಲಿ ಯಾವ ತರಹದ ಗಣಿಗಾರಿಕೆ ನಡೆಯುತ್ತಿದೆ;

ಆ ಯಾವ ಯಾವ ಸ್ಥಳಗಳಲ್ಲಿ ಗಣಿಗಾರಿಕೆ ನಡೆಸಲಾಗುತ್ತಿದೆ;

ಇ ಗಣಿಗಾರಿಕೆ ನಡೆಸಲು ಯಾರ್ಯಾರಿಗೆ ಪರವಾನಗಿಯನ್ನು ಇಲಾಖೆಯಿಂದ ಒದಗಿಸಲಾಗಿದೆ; (ತಾಲ್ಲೂಕುವಾರು ವಿವರ ಒದಗಿಸುವುದು)

ಶ್ರೀ ಬಿ ಎಸ್ ಯಡಿಯೂರಪ್ಪ(ಮುಖ್ಯಮಂತ್ರಿಯವರು)

ಅ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ, ಮುಖ್ಯ ಖನಿಜಗಳಿಗೆ 8 ಕಲ್ಲು ಗುಣಿಗುತ್ತಿಗೆಗಳನ್ನು, ಅಲಂಕಾರ ಶಿಲೆಗೆ 19 ಮತ್ತು ಕಟ್ಟಡದ ಕಲ್ಲಿಗೆ 275 ಕಲ್ಲುಗುಣಿಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ.

ಜಿಲ್ಲಾಡಳಿತವು ಈ ಜಿಲ್ಲೆಯಲ್ಲಿ ಮರಳು ಗಣಿಗಾರಿಕೆಯನ್ನು ಸ್ಥಳೀಯ ಬಳಕೆಗೆ ಮಾತ್ರ ಸೀಮಿತಗೊಳಿಸಿ ಜಿಲ್ಲೆಯಿಂದ ಹೊರಗೆ ಮರಳು ಸಾಗಾಣಿಕೆ ಮಾಡುವುದು ನಿಷೇಧಿಸಿದೆ.

2010–11ನೇ ಸಾಲಿನಲ್ಲಿ ಮೂರು ಅನಧಿಕೃತ ಕಲ್ಲು ಗಣಿಗಾರಿಕೆ ಪ್ರಕರಣಗಳನ್ನು ಗುರುತಿಸಿ ರೂ.1.39 ಲಕ್ಷ ದಂಡ ವಿಧಿಸಿ ವಸೂಲಿ ಮಾಡಲಾಗಿದೆ. ಅನಧಿಕೃತ ಮರಳು ಗಣಿಗಾರಿಕೆ/ಸಾಗಾಣಿಕೆಯಲ್ಲಿ ತೊಡಗಿದ್ದ 175 ವಾಹನಗಳನ್ನು ಗುರ್ತಿಸಿ, ರೂ.8.28 ಲಕ್ಷ ವಿಧಿಸಿ ವಸೂಲಿ ಮಾಡಲಾಗಿದೆ.

ಆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಗಣಿಗಾರಿಕೆ ನಡೆಯುತ್ತಿದ್ದು, ವಿವರಗಳನ್ನು ಅನುಬಂಧ–Iರಲ್ಲಿ ನೀಡಿದೆ.

ಇ. ವಿವರಗಳನ್ನು ಅನುಬಂಧ–1ರಲ್ಲಿ ನೀಡಿದೆ.

ರಾಜೀವ್‌ಗಾಂಧಿ ವಸತಿ ಮಹಾಮಂಡಲ

175(791) ಶ್ರೀ ನರಸಿಂಹ ಸ್ವಾಮಿ ಜೆ:(ದೊಡ್ಡಬಳ್ಳಾಪುರ) ಮಾನ್ಯ ವಸತಿ, ವಾರ್ತಾ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜೀವ್ ಗಾಂದಿ ವಸತಿ ಮಹಾಮಂಡಲದಿಂದ 2009–10ನೇ ಸಾಲಿಗೆ ನೀಡಿರುವ ಮನೆಗಳು ಎಷ್ಟು;

ಅ) ಅದರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿಗೆ ನೀಡಿರುವ ಮನೆಗಳೆಷ್ಟು; ಹಾಗೂ ಭೌತಿಕ ಗುರಿ ಎಷ್ಟು;

ಇ) ಫಲಾನುಭವಿಗಳಿಗೆ ಸರ್ಕಾರ ನೀಡುತ್ತಿರುವ ಹಣವೆಷ್ಟು; ಹಾಗೂ ಈ ಮೊತ್ತದಲ್ಲಿ ಮನೆ ನಿರ್ಮಿಸಲು ಸಾಧ್ಯವಿದೆಯೇ?

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು(ವಸತಿ, ವಾರ್ತಾ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು.)

ಅ) ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ 2009–10ನೇ ಸಾಲಿಗೆ ಈ ಕೆಳಕಂಡ ಯೋಜನೆಗಳಡಿ ಒಟ್ಟು 89489 ಮನೆಗಳ ಗುರಿಯನ್ನು ನಿಗದಿಪಡಿಸಲಾಗಿದೆ.

ಕ್ರ.ಸಂ	ಯೋಜನೆ	ಗುರಿ
1	ಗ್ರಾಮೀಣ ಅಂಬೇಡ್ಕರ್	10000
2	ಇಂದಿರಾ ಆವಾಸ್ ಯೋಜನೆ	79489
3	ಗ್ರಾಮೀಣ ಆಶ್ರಯ	0
ಒಟ್ಟು		**89489**

ಆ) ಮೇಲೆ ತಿಳಿಸಿದ ಯೋಜನೆಗಳಡಿ ದೊಡ್ಡಬಳ್ಳಾಪುರ ತಾಲ್ಲೂಕಿಗೆ ನೀಡಿರುವ ಮನೆಗಳ ಗುರಿ ಇಂತಿದೆ.